ಕಾಡುಹರಟೆ ಹೊಡೆಯುತ್ತಾ ಕಾಲ ಕಳೆಯುವ ಮಂದಿಗೂ ಒಂದು ಬಗೆ ಅನುಕೂಲ.

ಕ್ಷೌರ ಮಾಡುವುದಕ್ಕಿಂತ ಹೆಚ್ಚಾಗಿ ಗುಂಡನಿಗೆ ಯಕ್ಷಗಾನ, ನಾಟಕದ ಹುಚ್ಚು. ಅದರ ಜೊತೆಗೆ ಕುಡಿತದ ಚಟ ಬೇರೆ! ಊರಿನಲ್ಲೇ ಯಕ್ಷಗಾನ ಮೇಳ, ನಾಟಕ ತಂಡ ಕಟ್ಟಿದ್ದ. ಸಾಲದೆಂಬಂತೆ ಬೇರೆ ಊರುಗಳಲ್ಲಿ ನಡೆಯುತ್ತಿದ್ದ ಯಕ್ಷಗಾನ, ನಾಟಕಗಳಲ್ಲಿ ಪಾರ್ಟ್ ಮಾಡಲುಹೋಗುತ್ತಿದ್ದ. ಹಾಗಾಗಿ ಅವನು ಚೌರದ ಷಾಪ್ ತೆಗೆಯುತ್ತಿದ್ದದ್ದಕ್ಕಿಂತ ಮುಚ್ಚಿರುತ್ತಿದ್ದದ್ದೇ ಹೆಚ್ಚು! ತೀರ್ಥ ಸೇವಿಸದೇ ರಂಗ ಪ್ರವೇಶ ಅವನ ಪಾಲಿಗೆ ಅಸಾಧ್ಯವಾದ ಮಾತು. ''ಕ್ವಾರ್ಟರ್ ಏರಿಸಿದರೆ ಸಾಕು, ಪಾರ್ಟ್ ಹಾಕಿ ರಂಗದ ಮೇಲೆ ಹೋದರೆ ಮಾತಿನ ಜೋಶೇ ಬೇರೆ, ಬಾಂಚೋತ್!'' ಎಂಬುದು ಅವನ ಹೆಗ್ಗಳಿಕೆ. ಯಕ್ಷಗಾನ ಪ್ರಸಂಗಗಳಲ್ಲಿ ತಾನು ದೇವಾನುದೇವತೆಗಳಿಗೂ, ನಾಟಕಗಳಲ್ಲಿ ಇತಿಹಾಸದ ಅನೇಕ ರಾಜ ಮಹಾರಾಜರಿಗೂ, ಸಾರ್ವಭೌಮರಿಗೂ, ಚಕ್ರವರ್ತಿಗಳಿಗೂ ಚೌರ ಮಾಡಿದವನೆಂದೂ, ದೇವರೇ ಆಗಲಿ, ರಾಜಮಹಾರಾಜ, ಚಕ್ರವರ್ತಿ, ಸಾರ್ವಭೌಮರೇ ಆಗಲಿ, ಕ್ಷೌರಿಕರ ಮುಂದೆ ತಲೆ ಬಾಗಲೇಬೇಕು ಎಂದು ತನ್ನ ವೃತ್ತಿ, ಕುಲದ ಹಿರಿಮೆ ಬಗ್ಗೆ ಪೌರುಷ ಕೊಚ್ಚುತ್ತಿದ್ದ. ಅಷ್ಟೇಅಲ್ಲ, ದೇವಾನಂದ್, ದಿಲೀಪ್ ಕುಮಾರ್ ಮುಂತಾದ ಪ್ರಖ್ಯಾತ ಹಿಂದೀ ಸಿನಿಮಾ ನಟರಿಗೂ ಕಟಿಂಗ್

